ವಿಜಯ ಕರ್ನಾಟಕ




ಲಂಡನ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಶರತ್ ಗಾಯಕ್‌ವಾಡ್ ಅವರನ್ನು ಜೈನ್ ವಿಶ್ವವಿದ್ಯಾಲಯದ ವತಿಯಿಂದ ಸೋಮವಾರ ಸನ್ಮಾನಿಸಲಾಯಿತು.

# ಕ್ರೀಡಾ ಸಾಧಕರಿಗೆ ವಾರ್ಷಿಕ ಪ್ರಶಸ್ತಿ

▪ ವಿಕ ಸುದ್ದಿಲೋಕ, ಬೆಂಗಳೂರು

ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕ್ರೀಡೆಯಲ್ಲಿ ಸಾಧನೆ ಮಾಡಿದ ಜೈನ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಕಾಲೇಜಿನ ಆಡಳಿತ ಮಂಡಳಿ ಸೋಮವಾರ ನಗದು ಬಹುಮಾನ ನೀಡಿ ಗೌರವಿಸಿತು.

ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯದಲ್ಲಿ ಚಿನ್ನ ಗೆದ್ದವರಿಗೆ 7,000 ರೂ. ಬೆಳ್ಳಿ ಗೆದ್ದವರಿಗೆ 4,000 ರೂ ಹಾಗೂ ಕಂಚಿನ ಪದಕ ಗೆದ್ದವರಿಗೆ 3,000 ರೂ. ನೀಡಿ ಗೌರವಿಸಲಾಯಿತು. ರಾಷ್ಟ್ರೀಯ ದಾಖಲೆ ಮಾಡಿದವರಿಗೆ ವಿಶೇಷ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಗದು ಬಹುಮಾನ ಪಡೆದವರು

ಲಂಡನ್ ಒಲಿಂಪಿಕ್ಸ್‌ನಲ್ಲಿ ದೇಶವನ್ನು ಪ್ರತಿನಿಧಿಸಿ ಈಜುಗಾರ ಗಗನ್ ಉಳ್ಳಾಲಮಠ ಅವರಿಗೆ 1 ಲಕ್ಷ ರೂ ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು. ಲಂಡನ್ ಪ್ಯಾರಾಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಶರತ್ ಗಾಯಕ್‌ವಾಡ್ ಅವರನ್ನೂ 1 ಲಕ್ಷ ರೂ. ನೀಡಿ ಗೌರವಿಸಲಾಯಿತು. ಅದೇ ರೀತಿ ಅಂತಾರಾಷ್ಟ್ರೀಯ ಗಾಲ್ಫ್‌ನಲ್ಲಿ ಮಿಂಚಿದ ಜೈನ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಾದ ಖಾಲಿನ್ ಜೋಶಿ, ತ್ರಿಶೂಲ್ ಚಿನ್ನಪ್ಪ ಮತ್ತು ಸಯ್ಯದ್ ಸಾಧಿಕ್ ಅಹಮ್ಮದ್ ಅವರಿಗೆ ತಲಾ 5,000 ರೂ. ನೀಡಿ ಗೌರವಿಸಲಾಯಿತು.

ಬ್ಯಾಡ್ಮಿಂಟನ್ ತಾರೆ ಪೂರ್ವಿಶಾ ರಾಮ್ (10,000 ರೂ) ಹಾಗೂ ಚೆಸ್ ತಾರೆ ಅಶ್ವಿನ್ (5000ರೂ) ಜಯರಾಮ್ ಅವರನ್ನೂ ಇದೇ ವೇಳೆ ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು.

ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯದಲ್ಲಿ ಉತ್ತಮ ಸಾಧನೆ ತೋರಿದ ವಿಶ್ವವಿದ್ಯಾನಿಲಯದ ಈಜು ತಂಡದ ಸದಸ್ಯರಾದ ಸುರಭಿ ತಿಪ್ರೆ (68,000 ರೂ.), ಫರಿಹಾ ಜಮಾನ್ (38,000 ರೂ.), ಪೂರ್ವ ಶೆಟ್ಟಿ (24,000 ರೂ), ಲೇಖಾ ಕಾಮತ್ (5,000) ಹಾಗೂ ರೆಹಾನ್ ಪೂಂಜಾ (36,000 ರೂ) ಅವರನ್ನು ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಕ್ರಿಕೆಟ್ ತಂಡಕ್ಕೆ 48,000 ರೂ., ಪುರುಷರ ಟೆನಿಸ್ ತಂಡಕ್ಕೆ 25,000 ರೂ. ಹಾಗೂ ಮಹಿಳಾ ಟೆನಿಸ್ ತಂಡಕ್ಕೆ 16,000 ರೂ. ನೀಡಿ ಇದೇ ವೇಳೆ ಸನ್ಮಾನಿಸಲಾಯಿತು.